ಆದೇಶ ಉಲ್ಲಂಘನೆ ಆಗಿಲ್ಲ. ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಿರುವುದು ಉಂಟು. ಮುಖ್ಯ ಮಂತ್ರಿಯವರ ಕಛೇರಿಯಿಂದ ಬಂದಿರತಕ್ಕ ಕಾರಣದಿಂದ ಮಾಡಿದೆಯೇ ಹೊರತು, ಅದು ಅದಕ್ಕೂಸ್ಕರ ಅಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಿದ್ದೇನೆ, ಯಾವುದು ಸಮಂಜಸವೋ ಅದನ್ನು ಮಾಡಿ ಎಂದು ಹೇಳುತ್ತೇನೆ. ಒಂದು ಮಾತು ಹೇಳುತ್ತಿದ್ದೇನೆ, ''ಎ'' ತರಗತಿ ಮತ್ತು ಬಿ ತರಗತಿ, ಅಲ್ಲಿ ತಾವು ಒಪ್ಪಿದ ಪ್ರಕಾರ, ಈ ೮೬ ಜನ ದೊಡ್ಡ ಹುದ್ದೆದಾರರು ಇರುವಾಗ, ಇಬ್ಬರು ಮಾತ್ರ ನಿಮ್ಮ ವರ್ಗದವರನ್ನು ನೇಮಕ ಮಾಡಿದ್ದೀರಿ, ಮತ್ತೆ ''ಎ'' ನಲ್ಲಿ ೬೧ ಅಧಿಕಾರಿಗಳು ಇರುವಾಗ, ಇಬ್ಬರನ್ನು ಮಾತ್ರ ನೇಮಕ ಮಾಡಿದ್ದೀರಿ. ಕೇಂದ್ರಸರ್ಕಾರದ ಸರ್ಕ್ಯುಲರ್‌ನ್ನು ಈ ಸರ್ಕಾರವೂ ಒಪ್ಪಿದೆ. ಈ ಹುದ್ದೆಗಳನ್ನು ತುಂಬುವುದಕ್ಕೆ ನೇರವಾದ ರೆಕ್ರೂಟ್‌ಮೆಂಟ್ ಮಾಡಬೇಕೆಂದು ಹೇಳಿದ್ದಾರೆ, ಸ್ಪೆಷಲ್ ರೆಕ್ರೂಟ್‌ಮೆಂಟ್ ಎಂದು ಹೇಳಿದ್ದಾರೆ, ದಯವಿಟ್ಟು ಮಾಡುತ್ತೀರಾ ? ಇವರನ್ನು ತುಂಬುವುದಕ್ಕೆ ಈ ರೀತಿ ಮಾಡದೇಹೋದರೆ, ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಎಂ. ಚಂದ್ರಶೇಖರ್.—ಇದನ್ನು ಕರ್ನಾಟಕ ಲೋಕ ಸೇವಾ ಆಯೋಗದವರು ಮಾಡಬೇಕು. ನೇರ ನೇಮಕಗಳನ್ನು ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಬಹುದು, ಈ ಒಂದೇ ಇಲಾಖೆಯಲ್ಲ, ಅನೇಕ ಇಲಾಖೆಗಳಲ್ಲಿ ಇವೆ. ಇದು ಪರಿಶೀಲಿಸುವಂತಾದ್ದು ಈ ಕಾರಣ ಇವತ್ತು ಖಾಲಿ ಇರುವಂಥ, ಜಾಗಗಳಿಗೆ ಹೊಸ ನೇಮಕಗಳನ್ನು ನೇರವಾಗಿ ಮಾಡಬೇಕೇ, ಅಥವಾ ಬಡ್ತಿ ಮಾಡಬೇಕೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

3) ಮೈಸೂರು ಜಿಲ್ಲೆಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ಆಗಿ, ಕೆಲಸಕ್ಕೆ ಆದೇಶ ಕೊಡದಿರುವ ಬಗ್ಗೆ

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯ ಗ್ರಾಮ ಲೆಕ್ಕಿಗರ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ಆಗಿ ಎರಡುವರ್ಷಗಳಾಗಿದ್ದರೂ ಇನ್ನೂ ಕೆಲಸಕ್ಕೆ ತೆಗೆದುಕೊಳ್ಳಲು ಸರ್ಕಾರವು ಆದೇಶ ನೀಡದೇ ಇರುವುದರಿಂದ ಆಗಿರುವ ತೊಂದರೆ ಬಗ್ಗೆ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿ),—

ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ೧೧೫ ಗ್ರಾಮಲೆಕ್ಕಿಗರ ಹುದ್ದೆಗಳ ಆಯ್ಕೆಗಾಗಿ ಸಂದರ್ಶನ ನಡೆಸಿರುವುದು ನಿಜ. ಇತ್ತೀಚಿನ ಸರ್ಕಾರಿ ಆದೇಶ ಕ್ರಮಾಂಕ ಆರ್‌ಡಿ ೧೯೦ ಬಿಎಸ್‌ಸಿ ೮೭, ದಿನಾಂಕ ೨.೪.೧೯೮೮ರ ಅನ್ವಯ ಮಂಡಲ ಪಂಚಾಯಿತಿ ರಚನೆಗಳ ತತ್ವರಿಣಾಮವಾಗಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೨೦೫ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಕಡಿಮೆಗೊಳಿಸಲಾಗಿದೆ.

ದಿನಾಂಕ ೧.೪.೧೯೮೭ ರಿಂದ ಅನುಷ್ಠಾನಕ್ಕೆ ಬಂದ ಮಂಡಲ ಪಂಚಾಯಿತಿಗಳ ರಚನೆಯಿಂದಾಗಿ ಕಂದಾಯ ಇಲಾಖೆಯ ೭೧೯ ಪ್ರಥಮ ದರ್ಜೆ ಸಹಾಯಕರನ್ನು ರಾಜ್ಯದಲ್ಲಿ ಪ್ರತಿಯೋಜನೆ ಮೇಲೆ ಮಂಡಲ ಪಂಚಾಯತ್ ಕಾರ್ಯದರ್ಶಿ ಹುದ್ದೆಗಳಿಗೆ ನೇಮಕ ಮಾಡಲಾಗಿದ್ದು, ತತ್ಪರಿಣಾಮವಾಗಿ ಉದ್ಭವಿಸಿರುವ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಯನ್ನು ತೊಡೆದು ಹಾಕಿ ಖಾಲಿ ಆದ ಗ್ರಾಮಲೆಕ್ಕಿಗರು ಮತ್ತು ದ್ವಿತೀಯ ದರ್ಜೆ ಸಹಾಯಕರಿಗೆ ೬೦.೪೦ ರ ಅನುಪಾತದಲ್ಲಿ ಮುಂಬಡ್ತಿ ನೀಡಲು ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಾತ್ಕಾಲಿಕ ಕಿದ್ದುಪಡಿಯನ್ನು ದಿನಾಂಕ ೨೯-೩-೧೯೮೮ ರಂದು ಮಾಡಲಾಗಿದೆ. ಹೀಗೆ ಖಾಲಿ ಗ್ರಾಮಲೆಕ್ಕಿಗರಿಗೆ ಬಡ್ತಿ ನೀಡುವ ಮೂಲಕ ತೆರವಾಗುವ ಹುದ್ದೆಗಳಿಗೆ, ಆಯ್ಕೆಯಾದ ಅಭ್ಯರ್ಥಿಗಳನ್ನು ಭರ್ತಿ ಮಾಡುವ ಸಾಧ್ಯತೆಯನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಸಭೆಯಲ್ಲಿ ಅನೇಕ ಸಲ ಹೇಳಿದ್ದೇನೆ. ಈ ಮಂಡಲ್ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಜನ ಗ್ರಾಮ ಲೆಕ್ಕಿಗರು ಮಂಡಲ್ ಪಂಚಾಯ್ತಿ ಕೆಲಸವನ್ನು ಮಾಡುತ್ತಿದ್ದರು. ಈಗ ಈ ಕೆಲಸವನ್ನು ಮಾಡುವ ಅವಶ್ಯಕತೆ ಇಲ್ಲ, ಇಡೀ ರಾಜ್ಯದ ತುಂಬ ಒಂದು ಉಳತಾಫಿಯದ ದೃಷ್ಟಿಯಿಂದ ಮತ್ತು ಕೆಲಸದ ದೃಷ್ಟಿಯಿಂದ

ಗ್ರಾಮಲೆಕ್ಕಿಗರ ಹುದ್ದೆಯನ್ನು ಕಡಿಮೆ ಮಾಡಿದೆ. ಮೈಸೂರು ಜಿಲ್ಲೆಯಲ್ಲಿ ೨೦೫ ಹುದ್ದೆಗಳನ್ನು ಕಡಿಮೆ ಮಾಡಿದೆ. ಈ ಕಾರಣದಿಂದ ಈಗಾಗಲೇ ಸಂದರ್ಶನ ಮಾಡಿದಂಥ ಅಭ್ಯರ್ಥಿಗಳಿಗೆ ಆಜ್ಞೆ ಕೊಟ್ಟಿಲ್ಲ, ಸೆಲೆಕ್ಟ್ ಮಾಡಿದೆ. ಮಂಡಲ ಪಂಚಾಯ್ತಿ ಬಂದಮೇಲೆ ಅನೇಕ ಜನ ಹಳೆಯ ಮೈಸೂರಿನಲ್ಲಿ ಮಂಡಲ್ ಪಂಚಾಯ್ತಿ ಸೆಕ್ರಟರಿಗಳಾಗಿ ವಿಲೇಜ್ ಅಕೌಂಟೆಂಟ್‌ಗಳೇ ಇದ್ದರು. ಮುಂಬೈ ಕರ್ನಾಟಕದಲ್ಲಿ ಈ ರೀತಿ ಆಗಿಲ್ಲ. ಅಲ್ಲಿ ಪಂಚಾಯ್ತಿಯವರೇ ಸೆಕ್ರಟರಿಯವರನ್ನು ನೇಮಿಸಿಕೊಂಡಿದ್ದಾರೆ. ಆದ್ದರಿಂದ ೭–೮ ಕೋಟಿ ರೂಪಾಯಿಗಳ ಉಳಿತಾಯ ಆಗುತ್ತದೆ ಮತ್ತು ಕೆಲಸವೂ ಕಡಿಮೆ ಇದೆ. ಹೀಗಾಗಿ ಈ ಹುದ್ದೆಗಳನ್ನು ಕಡಿಮೆ ಮಾಡಿದ್ದೇವೆ. ಇವರಿಗೆ ಬಡ್ತಿ ಕೊಡುವ ವಿಷಯ ಬಂದಿದೆ. ಮಂಡಲ್ ಪಂಚಾಯ್ತಿ ಸೆಕ್ರಟರಿಗಳಾಗಿ ಕೆಲವರು ಹೋಗುತ್ತಿದ್ದಾರೆ. ಈ ಜಾಗಗಳೆಲ್ಲ ಖಾಲಿಯಾದಾಗ, ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ನೇಮಕ ಮಾಡುತ್ತೇವೆ.

ಶ್ರೀ ಡಿ. ಟಿ. ಜಯಕುಮಾರ್.— ಮಾನ್ಯ ಸಚಿವರು ಕೊಟ್ಟ ಉತ್ತರ ಸರಿ. ಆದರೆ, ಇವತ್ತು ಆಯ್ಕೆಯಾದ ಅಭ್ಯರ್ಥಿಗಳಿಗೆ ''ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ'' ಎಂಬ ನೀತಿಯಾಗಿದೆ. ಆಯ್ಕೆ ಆಗದೇ ಇದ್ದರೆ ಮಾನ್ಯ ಸಚಿವರು ಹೇಳುವುದು ಸರಿ ಆದರೆ ಅವರಿಗೆ ಆಯ್ಕೆಯಾಗಿದೆ. ಸಮಾರು ೨ ವರ್ಷವಾಯಿತು, ಗೆಜೆಟ್ ನೋಟಿಫಿಕೇಷನ್ ಆಗಿದೆ. ಇನ್ನೇನು ಆದೇಶ ಕೊಡಬೇಕೆಂಬ ಸಂದರ್ಭದಲ್ಲಿ ಈ ವಿಚಾರವನ್ನು ತೆಗೆದುಕೊಂಡಿದ್ದಾರೆ. ಈಗ ಮಂಡಲ್ ಪಂಚಾಯ್ತಿಗಳಿಗೆ ತೊಂದರೆ ಇದ ಎಂದು ಗ್ರಾಮೀಣ ಸಚಿವರನ್ನೂ ನಾವು ಕೇಳಿಕೊಂಡಿದ್ದೆವು. ಇಡೀ ಮಂಡಲ್ ಪಂಚಾಯ್ತಿಯಲ್ಲಿ ರೆವಿನ್ಯೂ ಕಲೆಕ್ಟ್ ಮಾಡುವುದಕ್ಕೆ ಬಿಲ್ ಕಲೆಕ್ಟರ್ ಎಂದು ನೇಮಕ ಮಾಡಿಕೊಳ್ಳಬೇಕೆಂದು ಹೇಳಿದ್ದೆವು. ಇದಾದ ನಂತರ ಮತ್ತೆ ಇನ್ನೊಂದು ಸಂದೇಶ ನೀಡಿ ಯಾರನ್ನೂ ಆಯ್ಕೆ ಮಾಡಬೇಡಿ, ಸರ್ಕಾರದಿಂದಲೇ ಆಯ್ಕೆ ಮಾಡುತ್ತೇವೆಂದು ಹೇಳಿದರು. ಮಾನ್ಯ ಗ್ರಾಮೀಣ ಸಚಿವರು. ಈ ಸ್ಥಾನಗಳಿಗೆ, ಮೈಸೂರು ಡಿವಿಜನಲ್ ಲೆವಲ್‌ಗೆ ೨೧೧ ಜನ ಗ್ರಾಮ ಲೆಕ್ಕಿಗರನ್ನು ಆಯ್ಕೆ ಮಾಡಿದ್ದೀರಿ ಆದ್ಯತೆ ಆಧಾರದಮೇಲೆ ಅಲ್ಲಿಗಾದರೂ ಇವರಿಗೆ ಕೊಟ್ಟರೆ ಒಳ್ಳೆಯದು. ಏಕೆಂದರೆ ಎಷ್ಟೋ ಜನರಿಗೆ ಮದುವೆ ಆಗಿದೆ, ಮಕ್ಕಳು ಆಗಿದ್ದಾರೆ. ಅವರು ಕೆಲಸವಿಲ್ಲದೆ, ಇದನ್ನೇ ಕಾಯುತ್ತಾ ಕುಳಿತಿದ್ದಾರೆ. ಇವತ್ತು ಬರುತ್ತದೆ, ನಾಳೆ ಬರುತ್ತದೆ ಎಂದು ಎದುರು ನೋಡುತ್ತಿದ್ದಾರೆ. ಕೈಗೆ ಬಂದ ತುತ್ತು ಬಾಯಿಗೆ ಬರುತಕ್ಕಂಥ ಕೆಲಸವನ್ನು ಮಾನ್ಯಸಚಿವರು ಸಹಾನುಭೂತಿಯಿಂದ ಮಾಡಬೇಕು. ಏಕೆಂದರೆ ಅವರಿಗೆ ಬೇರೆ ಕಡೆ ಕೆಲಸ ಸಿಕ್ಕುವಹಾಗೆ ಇಲ್ಲ, ಇವತ್ತು ಅವರು ಕೆಲಸಕ್ಕೆ ಆಯ್ಕೆಯಾಗಿ, ಗೆಜೆಟ್ ನೋಟಿಫಿಕೇಷನ್ ಆಗಿ ಆದೇಶ ಬಂದಿಲ್ಲ. ಇವರನ್ನು ಸಹಾನುಭೂತಿಯಿಂದ ನೋಡಿ, ಆದಷ್ಟು ಬೇಗನೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್, ಬೊಮ್ಮಾಯಿ.— ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಮಂಡಲ್ ಪಂಚಾಯ್ತಿ ಅಸ್ತಿತ್ವಕ್ಕೆ ಬಂದು ವರ್ಷದ ಮೇಲೆ ಆಯಿತು. ಒಂದು ವರ್ಷದ ನಂತರ ಈ ಗ್ರಾಮ ಲೆಕ್ಕಿಗರನ್ನು ಆಯ್ಕೆ ಮಾಡಿದ್ದೀರಿ. ೪ ೨–೮೮ ರಲ್ಲಿ ಗೆಜೆಟ್ ನೋಟಿಫಿಕೇಷನ್ ಬಂದಿದೆ. ಒಂದು ವರ್ಷ ವಿಳಂಬವಾದ ನಂತರ ಇವರಿಗೆ ನಿಮಗೆ ಕೆಲಸಕ್ಕೆ ಆಪ್ಪಣೆ ಕೊಡುವುದಕ್ಕಾಗುವುದಿಲ್ಲ. ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೀರಿ. ಇವತ್ತು ೨೧೧ ಕುಟುಂಬಗಳಿಗೆ ಇದರಿಂದ ತೊಂದರೆಯಾಗಿದೆ. ಆದಷ್ಟು ಶೀಘ್ರವಾಗಿ ಪರಿಹಾರದ ರೂಪದಲ್ಲಿ ಕೆಲಸ ಕೊಡುವುದು ಒಹಳ ಉತ್ತಮ. ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇವತ್ತು ಸರ್ಕಾರ ಈ ನಿರ್ಣಯ ತೆಗೆದುಕೊಂಡಿದೆ. ಹಣಕಾಸಿನ ಪ್ರಶ್ನೆ ಇದರಲ್ಲಿ ಅಡಗಿದೆ. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಗ್ರಾಮಲೆಕ್ಕಿಗರಿಗೆ ನೇಮಿಸುವುದಕ್ಕೆ ಸಾಧ್ಯವಿಲ್ಲ, ಎಲ್ಲಿ ಖಾಲಿಯಾಗುತ್ತವೆ ಅಂತಹ ಜಾಗಕ್ಕೆ ಮಾತ್ರ ನೇಮಿಸಬಹುದು. ಆರ್.ಡಿ.ಪಿ.ಆರ್.ನವರು ತೆಗೆದುಕೊಳ್ಳುವುದಕ್ಕೆ ಒಪ್ಪಿದರೆ ಅವರ ಜೊತೆ ಚರ್ಚೆ ಮಾಡುತ್ತೇನೆ. ಸಹಾನುಭೂತಿಯಿಂದ ಪರಿಶೀಲನೆ ಮಾಡಿ, ಸಾಧ್ಯವಾದಷ್ಟು ಬೇಗ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.— ಅಧ್ಯಕ್ಷರೇ, ಸರ್ಕಾರ ಯಾವಾಗಲೂ ಒಂದು ಸ್ಪಷ್ಟ ನಿರ್ಧಾರಕ್ಕೆ ಬರಬೇಕು. ಮೈಸೂರು ನಗರದಲ್ಲಿ ೨೧೭ ಜನಕ್ಕೂ ಜಾಸ್ತಿ ಸಂದರ್ಶನ ಮಾಡಿ, ಈ ಹುದ್ದೆಗಳಿಗೆ ಆಯ್ಕೆ ಮಾಡಲಾಯಿತು. ಈ ಜನ, ನಮಗೆ ಈ ಹುದ್ದೆಗಳು ಸಿಗುತ್ತವೆ ಎಂದು ಈಗಲೂ ಕಾಯುತ್ತಾ ಕುಳಿತಿದ್ದಾರೆ. ಸಂದರ್ಶನ ಮಾಡುವುದಕ್ಕೆ ಮೊದಲೇ ಈ ಸಮಿತಿಯನ್ನು ಕ್ಯಾನ್ಸಲ್

ಮಾಡಿ, ನಮ್ಮ ನೇಮಕಾತಿ ಬದಲಾವಣೆ ಮಾಡಿದ್ದೇವೆ, ವಿಷಯವನ್ನು ಬದಲಾವಣೆ ಮಾಡಿದ್ದೇವೆ ಎಂದು ಸ್ಪಷ್ಟವಾಗಿ ಹೇಳಬಹುದಿತ್ತು. ಆದರೆ ಸಂದರ್ಶನವಾಗಿ, ಆಯ್ಕೆಯಾದ ಮೇಲೆ ಈಗ ನಮ್ಮ ನಿಲುವನ್ನು ಬದಲಾವಣೆ ಮಾಡಿದ್ದೇವೆ ಎಂದು ಹೇಳಿದರೆ ಆ ೨೦೭ ಜನರ ಪರಿಸ್ಥಿತಿ ಏನು ? ಈ ೨೦೭ ಜನರಿಗೆ ಯಾವರೀತಿ ಮಾರ್ಗದರ್ಶನ ಮಾಡುತ್ತೀರಿ, ಇವರಿಗೆ ಹೊಟ್ಟೆಪಾಡಿಗೆ ಏನು ತೋರಿಸುತ್ತೀರಿ ಎಂಬುದನ್ನು ತಾವು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೆಲವು ಸಂದರ್ಭಗಳಲ್ಲಿ ಇಂತಹ ಸಮಸ್ಯೆಗಳು ಬರುತ್ತವೆ. ಸರ್ಕಾರ ಈಗ ಆಜ್ಞೆ ಮಾಡಿದೆ. ಗ್ರಾಮಾಂತರಕ್ಕೆ ಗರಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಹುದ್ದೆಗಳನ್ನು ಕಡಿಮೆ ಮಾಡಿದ್ದೇವೆ. ಸಹಾನುಭೂತಿಯಿಂದ ವಿಚಾರ ಮಾಡತಕ್ಕ ಮಾತನ್ನು ಹೇಳಿದ್ದಾರೆ. ಆರ್.ಡಿ.ಪಿ.ಆರ್.ನವರೊಡನೆ ಮಾತನಾಡಿ, ಸಾಧ್ಯವಾದರೆ, ಯಾವರೀತಿ ಕೆಲಸ ಕೊಡಬೇಕು ಎಂಬ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.— ಅಧ್ಯಕ್ಷರೇ, ಮಂತ್ರಿಗಳು ಉತ್ತರ ಕೊಟ್ಟರು. ಆದರೆ ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ನೇಮಕಾತಿ ಸಮಿತಿಯನ್ನು ಮಾಡಿದ್ದೀರಿ, ಈಗ ಈ ಸಮಿತಿ ರದ್ದಾಗಿದೆಯೇ ಅವರು ಮಾಡಿರತಕ್ಕ ಆಯ್ಕೆ ಏನಿದೆ ಅದೂ ರದ್ದಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಆಯ್ಕೆ ರದ್ದಾಗಿದೆ ಎಂದು ಹೇಳಲಿಲ್ಲ, ಸ್ಥಳ ಇಲ್ಲದಿರುವುದರಿಂದ ಅವರಿಗೆ ಕೆಲಸ ಕೊಡುವುದಕ್ಕಾಗುವುದಿಲ್ಲ.

ಳ) ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರಿಗೆ ವಿಶ್ರಾಂತಿ ವೇತನವನ್ನು ಜಾರಿಮಾಡದಿರುವುದು.

ಶ್ರೀ ವೇದಾಂತ ಹೆಮ್ಮಿಗೆ. —ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರಿಗೆ ಸಿಂಡಿಕೇಟ್ ನಿರ್ಣಯ ಮಾಡಿದ್ದರೂ ಸಹ ಇದುವರೆಗೂ ವಿಶ್ರಾಂತಿ ವೇತನವನ್ನು ಜಾರಿ ಮಾಡದಿರುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜೀವರಾಜ ಆಳ್ವ (ಮಾನ್ಯ ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವಿಷಯ ಈಗಾಗಲೇ ಸರ್ಕಾರದಲ್ಲಿ ಪರಿಶೀಲನೆ ಮಾಡಿ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳನ್ನು ಅನ್ವಯಿಸುವಂತೆ ಅನುಶಾಸನವನ್ನು ರಚಿಸಿ ಸರ್ಕಾರಕ್ಕೆ ಕಳುಹಿಸಿಕೊಡಲು ದಿನಾಂಕ ೧೨-೩-೧೯೮೭ ರಂದು ವಿಶ್ವವಿದ್ಯಾನಿಲಯಕ್ಕೆ ತಿಳಿಸಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಈ ನೌಕರರಿಗೆ ವಿಶ್ರಾಂತಿ ವೇತನ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲು ಪೂರ್ಣವಾಗಿ ಒಪ್ಪಿದೆ ಎಂದು ಸರ್ಕಾರಕ್ಕೆ ಈಗ ತಿಳಿದು ಬಂದಿದೆ. ಈ ಬಗ್ಗೆ ಅನುಶಾಸನ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವೇದಾಂತ ಹೆಮ್ಮಿಗೆ. —ಮಾನ್ಯ ಅಧ್ಯಕ್ಷರೇ, ದಿನಾಂಕ ೫-೨-೧೯೮೨ರಲ್ಲಿ ಸರ್ಕಾರ ಒಂದು ಆರ್ಡರ್ ಹೊರಡಿಸಿತು. ಆರ್ಡರ್ ಸಂಖ್ಯೆ ಎಸ್.ಕೆ.ಡಬ್ಲ್ಯೂ. ಆರ್.ಎಲ್.ಪಿ:ಎಲ್ ೮೨ (೧೧) ಒಂದು ವಿನಾಯಿತಿ ನೀಡಿ ಆಜ್ಞೆ ಹೊರಡಿಸಿದರು. ಇದಾದ ಮೇಲೆ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದ ನೌಕರರು ಸಭೆ ಸೇರಿ ನಮಗೆ ಪ್ರಾವಿಡೆಂಟ್ ಫಂಡ್ ಮತ್ತು ಇ.ಎಸ್.ಐ. ಸೌಲಭ್ಯ ಬೇಡ ದಯಮಾಡಿ ಪೆನ್‌ಷನ್ ಕೊಡಿ ಎಂದು ಸಲಹೆ ಮಾಡಿ ಒಂದು ನಿರ್ಣಯವನ್ನು ಪಾಸು ಮಾಡಿ ೪-೧೦-೧೯೮೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಕೊಟ್ಟರು. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಸಭೆ ಸೇರಿ ಈ ನೌಕರರು ಕೊಟ್ಟ ನಿರ್ಣಯವನ್ನು ಅಂಗೀಕಾರ ಮಾಡಿ ಸರ್ಕಾರದ ಮುಂದೆಗೆ ಕಳುಹಿಸಿಕೊಟ್ಟರು ಆದರೆ ಅದು ಇದುವರೆವಿಗೂ ಆಗಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಿಂದ ಅವರಿಗೆ ಯಾವುದೇ ಲಾಭ ಬರುತ್ತಿಲ್ಲ ನೀವು ಇಂಡಸ್ಟ್ರೀಸ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಅವರನ್ನು ತಂದರೆ ಅವರಿಗೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ದಯವಾಡಿ ತಿಳಿಸಬೇಕು.